**ಓ.ಎಸ್‌ಃ 359/2012**
**ಡಿ.ಡಬ್ಲ್ಯೂಃ 03**
**ನಾಗಪ್ಪ ಬಾಟಿ**

**ದಿನಾಂಕಃ 16-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪ್ರತಿವಾದಿಯ (ಸಂಗಪ್ಪ ತಂಃತಿಪ್ಪಣ್ಣ ಜಿದ್ದಿಮನಿ) ರ ಪರ ಸಾಕ್ಷಿಯ ಮುಖ್ಯವಿಚಾರಣೆಃ**

ನಾನು ನನ್ನ ಮುಖ್ಯವಿಚಾರಣೆಯ ಪರವಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು ವಾದಿ ಪರ ಶ್ರೀ ಎನ್.ಎಸ್.ಎಂ. ವಕೀಲರಿಂದಃ**

**1**. ನನಗೆ ಈಗ 48 ವರ್ಷ ವಯಸ್ಸು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನಗೆ 75 ವರ್ಷ ಎಂದು ತಪ್ಪಾಗಿ ನಮೂದಿಸಲಾಗಿದೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ.

2. ತಿಪ್ಪಣ್ಣ ಖರೀದಿ ಮಾಡಿರುವ ಜಮೀನು ಸ.ನಂಬರ 14, ಚಿಕ್ಕಗರಸಂಗಿ ಗ್ರಾಮದ್ದು. ಸದರಿ ಜಮೀನನ್ನು ಖರೀದಿ ಮಾಡಲು ತಿಪ್ಪಣ್ಣ ತನ್ನ ಇನ್ನಿತರ ಜಮೀನುಗಳಿಂದ ಬಂದ ಆದಾಯವನ್ನೇ ಬಳಸಿರುತ್ತಾರೆ. ಅವರ ಇನ್ನುಳಿದ ಜಮೀನುಗಳು ಸ.ನಂಬರ ನನಗೆ ಹೇಳಲು ಬರುವುದಿಲ್ಲ. ಬಾಳಾಬಾಯಿ ಸಂಗಪ್ಪನ ಅಕ್ಕ. ಬಾಳಾಬಾಯಿಯ ಮಗಳೇ ಇಂದಿರಾಬಾಯಿ ಎಂದರೆ ಸರಿ. ಸದರಿ ಇಂದಿರಾಬಾಯಿ ಸಂಗಪ್ಪನ ಹೆಂಡತಿ ಎಂದರೆ ಸರಿ. ಗೋಪಾಲ ಸದರಿ ಇಂದಿರಾಬಾಯಿ ಅಣ್ಣ ಮತ್ತು ಬಾಳಾಬಾಯಿಯ ಮಗ.

ಓ.ಎಸ್ಃ 359/2012
ಡಿ.ಡಬ್ಲ್ಯೂಃ 03
**ನಾಗಪ್ಪ ಬಾಟಿ**

3. ನನಗೆ ಸಂತೋಷ ಎಂಬ ತಮ್ಮನಿದ್ದಾನೆ ಎಂದರೆ ಸರಿ. ಸದರಿ ಸಂತೋಷ ಗೋಪಾಲ ಬಾವಿಯನ್ನು ಸ.ನಂಬರ 14 ರಲ್ಲಿ ಬಾವಿಯನ್ನು ತೆಗೆದಾಗ ಕೆಲಸವನ್ನು ಮಾಡಿದ್ದಾನೆ ಎಂದರೆ ಸರಿಯಲ್ಲ. ಗೋಪಲನ ಹೆಸರು ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ನೊಂದಣಿಯಾದ ಬಗ್ಗೆ ನನಗೆ ಸನ್ 2011 ರಲ್ಲಿ ಗೊತ್ತಾಗಿರುತ್ತದೆ. ಗೋಪಾಲನ ಹೆಸರು ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ದಾಖಲಾಗುವ ಮುನ್ನ ಸಂಗಪ್ಪನ ತಂದೆಯ ಹೆಸರು ಇತ್ತು.

4. ದಾವಾ ಸ್ವತ್ತಿನಲ್ಲಿ 5 ಎಕರೆ ಮತ್ತು 2 ಎಕರೆ ಎಂಬ ಎರಡು ಪ್ರತ್ಯೇಕವಾದ ಪಟ್ಟಿಗಳು ಇವೆ ಎಂದರೆ ಸರಿಯಲ್ಲ. ನಾನು ಸ.ನಂಬರ 14 ರ ಜಮೀನಿಗೆ ಹೋಗಿದ್ದೇನೆ. ನನ್ನ ತೋಟ ಸದರಿ ಜಮೀನಿನ ಪಕ್ಕದಲ್ಲಿಯೇ ಇದೆ.

5. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಂಗಪ್ಪನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**